ಸಿ.ಸಿ ನಂಬ್ರಃ 188/2023
ಪಿ.ಡಬ್ಲ್ಯೂ : 1

ದಿನಾಂಕಃ 06-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಎಸ್ ವಕೀಲರಿಂದ

1. ಆರೋಪಿತ ನನ್ನ ಬಳಿ ಲಾಂಡ್ರಿ ಬ್ಯುಸಿನೆಸ್ ಶುರು ಮಾಡುತ್ತೇನೆ ಎಂದು ಹೇಳಿರುತ್ತಾನೆ. ಆರೋಪಿತ ನನ್ನ ಸ್ನೇಹಿತನಾದ ಅಖಿಲ್ ನಿಂದ ಪರಿಚಯಸ್ಥನಿರುತ್ತಾನೆ. ಆರೋಪಿತ ಲಾಂಡ್ರಿ ಬ್ಯುಸಿನೆಸ್ ನ್ನು ಎಲ್ಲಿ ಶುರು ಮಾಡಿರುತ್ತಾನೆ ಎಂದು ದಾಖಲೆಗಳು ಇರುವುದಿಲ್ಲ. ಆರೋಪಿಯ ಜೊತೆಗೆ ಲಾಂಡ್ರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾತು ಕತೆ ಆಗಿದ್ದು ಬಿಟ್ಟರೆ ಬೇರೆ ಯಾವುದೇ ವ್ಯವಹಾರದ ಬಗ್ಗೆ ಮಾತುಕತೆ ಆಗಿರುವುದಿಲ್ಲ. ಆರೋಪಿತನ ಲಾಂಡ್ರಿ ಬ್ಯುಸಿನೆಸ್‌ಗೆ ನಾನು ಹೂಡಿಕೆ ಮಾಡಿರುವುದಿಲ್ಲ. ನನಗೆ ಆತ ಹಣ ಸಹಾಯ ಮಾಡಬೇಕು ಎಂದು ಕೇಳಿ 22 ಲಕ್ಷ ಕೊಡಬೇಕೆಂದು ಕೇಳಿರುತ್ತಾನೆ.

2. ದೂರಿನಲ್ಲಿ ನಾನು ಹಣ ಕೊಟ್ಟ 8 ತಿಂಗಳ ಒಳಗೆ ಆರೋಪಿತ ದುಡ್ಡು ಕೊಡುತ್ತೇನೆ ಎಂದು ಹೇಳಿದ ವಿಚಾರ ನಮೂದಿಸಿರುತ್ತೇನೆ. ಪ್ರಾರಂಭದಲ್ಲಿ ಆತ 8 ತಿಂಗಳ ಒಳಗೆ ಹಣ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತಾನೆ. ನಾನು ಮೊದಲೇ ಒಟ್ಟು ಹಣವನ್ನು ಕೊಟ್ಟಿರುವುದಿಲ್ಲ. ಮೊದಲು 29 ಎಪ್ರೀಲ್ 2019 ರಂದು 20 ಸಾವಿರ ಕೊಟ್ಟಿರುತ್ತೇನೆ. ತದನಂತರ ಒಟ್ಟು 35 ಬಾರಿ ಆರೋಪಿಗೆ ಹಣ ವರ್ಗಾವಣೆ ಮಾಡಿರುತ್ತೇನೆ. ಒಟ್ಟು 19,40,000/- ರೂ. ಕೊಟ್ಟಿರುತ್ತೇನೆ.

3. ಹಣ ನೀಡಿದ್ದಕ್ಕೆ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ಕರಾರು ಪತ್ರವನ್ನು ಸೆಪ್ಟೆಂಬರ್ 6, 2021 ರಂದು ಕುಂದಾಪುರದಲ್ಲಿ ಮಾಡಿಕೊಂಡಿರುತ್ತೇನೆ. ಕರಾರು ಆಗುವಾಗ ನಾನು, ಆರೋಪಿತ, ಒಬ್ಬ ಸಾಕ್ಷಿ ನನ್ನ ಕಡೆಯಿಂದ, ಇನ್ನೊಬ್ಬ ಸಾಕ್ಷಿದಾರ ಆರೋಪಿತನ ಕಡೆಯವರು ಇದ್ದರು. ನಿ.ಪಿ 5 ಕರಾರು ಪತ್ರವನ್ನು ಆರೋಪಿತನ ಕಡೆಯವರೇ ತಯಾರಿಸಿ ತಂದಿರುತ್ತಾರೆ. ರವಿಕಿರಣ್ ನನಗೆ 10 ವರ್ಷದಿಂದ ಪರಿಚಯ ಇರುತ್ತಾನೆ. ಅಖಿಲ್ ಶೆಟ್ಟಿ ಸಹ 10 ವರ್ಷದಿಂದ ಪರಿಚಯ ಇರುತ್ತಾರೆ. ರವಿಕಿರಣ್ ಹಾಗೂ ಅಖಿಲ್ ಶೆಟ್ಟಿ ಯವರು ಸೆಪ್ಟೆಂಬರ್ 6 ರಂದು ಬನ್ನಾಡಿ ಸೋಮನಾಥ ಹೆಗ್ಡೆಯವರ ಕಚೇರಿಯಲ್ಲಿ ಸಹಿ ಮಾಡಿರುತ್ತಾರೆ. ಸದರಿ ನಿ.ಪಿ. 5 ರಲ್ಲಿ ಪೆನ್ಸಿಲ್ ನಲ್ಲಿ ಗುರುತು ಮಾಡಿದ ಚಿಹ್ನೆ ಯಾರು ಮಾಡಿದ್ದು ಎಂದರೆ ಸಾಕ್ಷಿ ಅವರೇ

ಮಾಡಿರಬಹುದು ಎಂದು ನುಡಿಯುತ್ತಾರೆ. ನಿ.ಪಿ.5 ರಲ್ಲಿ ನಾನು ಹಾಗೂ ಆರೋಪಿತ ಹಾಕಿದ ಸಹಿಯ ಇಂಕು ಬೇರೆ ಬೇರೆ ಇರುತ್ತದೆ ಎಂದರೆ ಸರಿ.

4. ಆರೋಪಿತ ಒಟ್ಟು ಫೆಬ್ರವರಿ 4, 2020 ರಂದು 20 ಸಾವಿರ, ಫೆಬ್ರವರಿ 5, 2020 ರಂದು 3,80,000/- ಒಟ್ಟು 4 ಲಕ್ಷ ಮರುಪಾವತಿ ಮಾಡಿರುತ್ತಾನೆ. ಆರೋಪಿತ ಒಟ್ಟು ನನಗೆ 3 ಚೆಕ್ ಕೊಟ್ಟಿರುತ್ತಾನೆ. ದಿನಾಂಕ ನೆನಪಿರುವುದಿಲ್ಲ. ಆಗಸ್ಟ್2022 ರಂದು ಕುಂದಾಪುರಕ್ಕೆ ಬಂದು ಚೆಕ್ ಕೊಟ್ಟಿರುತ್ತಾನೆ. ಆರೋಪಿತ ನನ್ನ ಕೈಗೆ ಚೆಕ್ ಕೊಟ್ಟ ನಂತರ ನಾನು ಆರೋಪಿಗೆ ಯಾವುದೇ ಹಣವನ್ನು ವರ್ಗಾವಣೆ ಮಾಡಿರುವುದಿಲ್ಲ. ಆರೋಪಿತ ನನಗೆ 4 ಲಕ್ಷ ಕೊಟ್ಟ ನಂತರ ಆತನಿಗೆ ನಾನು ಹಣವನ್ನು ಮರುಪಾವತಿಸಿರುತ್ತೇನೆ, ಅದು ದಾಖಲೆಯಲ್ಲಿ ಇದೆ, ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

5. ನಾನು 4 ಲಕ್ಷ ಕೊಟ್ಟ ನಂತರ ಪುನಃ ಆತನಿಗೆ ಹಣ ಕೊಟ್ಟಾಗ ಹಿಂದಿನ ಬಾಕಿ ಹಣ ಕೊಡಿ ಎಂದು ಆರೋಪಿಯಲ್ಲಿ ಕೇಳಿರುತ್ತೇನೆ. ಆರೋಪಿತ ನನಗೆ 4 ಲಕ್ಷ ಕೊಟ್ಟ ನಂತರವೇ ಕರಾರು ಪತ್ರ ಮಾಡಿಕೊಳ್ಳಲಾಗಿರುತ್ತದೆ. ಕರಾರು ಪತ್ರ ಆದ ನಂತರ ಆರೋಪಿಗೆ ಹಣ ಕೊಟ್ಟಿರುವುದಿಲ್ಲ. ಕೃಷ್ಣ ಮೂರ್ತಿ ಹಾಗೂ ಗಣೇಶ್ ರವರು ಆರೋಪಿಯ ಪಾರ್ಟನರ್ ಇದ್ದು ಆರೋಪಿತನೇ ಅವರ ಖಾತೆಗೆ ಹಣ ವರ್ಗಾಯಿಸಲು ಹೇಳಿದ್ದು ವರ್ಗಾಯಿಸಿರುತ್ತೇನೆ. ಅವರುಗಳು ಯಾವ ರೀತಿಯ ಪಾರ್ಟನರ್ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತನಿಗೆ ಹಣ ಕೊಟ್ಟ ಸಂದರ್ಭದಲ್ಲಿ ಲಾಂಡ್ರಿ ಬ್ಯುಸಿನೆಸ್ ಇದ್ದ ಬಗ್ಗೆ ಖುದ್ದಾಗಿ ವಿಚಾರಿಸಿರುವುದಿಲ್ಲ.

6. ಆ ಲಾಂಡ್ರಿ ಬ್ಯುಸಿನೆಸ್ ಈಗ ಚಾಲ್ತಿಯಲ್ಲಿರುತ್ತದಾ ಅಥವಾ ಬಂದ್ ಆಗಿರುತ್ತದಾ ಎಂದು ನನಗೆ ಮಾಹಿತಿ ಇರುವುದಿಲ್ಲ. ಆ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ನಾನು ಸದರಿ ಹಣವನ್ನು ನನ್ನ ಸಂಬಂಳದಿಂದ ಬಂದ ಹಣದಿಂದ ಕೊಟ್ಟಿರುತ್ತೇನೆ. ನಾನು ಆ ಸಮಯದಲ್ಲಿ ಎಕ್ಸಂಚೇರ್ ನಲ್ಲಿ ಕೆಲಸ ಮಾಡುತ್ತಿದ್ದೆ, ತಿಂಗಳಿಗೆ 60 ಸಾವಿರ ಸಂಬಳ ಇತ್ತು. ನಾನು ಆದಾಯ ತೆರಿಗೆ ಪಾವತಿದಾರನಾಗಿದ್ದು ನಾನು ಯಾವುದೇ ಇನ್‌ವೆಸ್ಟಮೆಂಟ್ ಮಾಡದೇ ಇದ್ದುದರಿಂದ ಸದರಿ ಮೊತ್ತವನ್ನು ಆದಾಯ ತೆರಿಗೆಯಲ್ಲಿ ಕಾಣಿಸಿರುವುದಿಲ್ಲ. ಸದರಿ 2019 ರಿಂದ 2022 ರವರೆಗಿನ ಆದಾಯ ತೆರಿಗೆಯನ್ನು ನಾನು ನ್ಯಾಯಲಯಕ್ಕೆ ಹಾಜರು ಪಡಿಸಬಹುದು.

7. ನನ್ನದು ಹಾಗೂ ಆರೋಪಿತನ ನಡುವೆ ಈ ಹಣದ ವ್ಯವಹಾರ ಹೊರತು ಪಡಿಸಿ ಬೇರೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ಚೆಕ್ ನಲ್ಲಿ ಯಾವ ದಿನಾಂಕ ನಮೂದು ಮಾಡಿರುತ್ತಾರೋ ನಾನು ಅದೇ ದಿನ ಬ್ಯಾಂಕಿಗೆ ಚೆಕ್ ನ್ನು ಹಾಜರು ಪಡಿಸಿರುತ್ತೇನೆ. 3 ಚೆಕ್

ನಲ್ಲಿ ನಮೂದಿಸಿರುವ ಮೊತ್ತಕ್ಕೂ ಹಾಗೂ ನಿ.ಪಿ.5 ಕರಾರು ಪತ್ರದಲ್ಲಿ ನಮೂದಿಸಿರುವ ಮೊತ್ತಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಆರೋಪಿತ ಚೆಕ್ ಕೊಡುವ ಪೂರ್ವದಲ್ಲಿ ಆರೋಪಿಯಿಂದ ಕರಾರು ಪತ್ರದಲ್ಲಿ ನಮೂದಿಸಿದ 15,46,000/- ರೂ. ಕೊಡುವುದು ಬಾಕಿ ಇತ್ತು.

ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ